# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 110/2017**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ಶೀಬಾ ಎಸ್. | *ಪ್ರಮಾಣ ಮಾಡಿಸಿದ ದಿನಾಂಕಃ* | |
| ಗಂಡನ ಹೆಸರು | ಃ | ಡಾ. ಜೋನಸ್ | **05.03.2020** | |
| ವಯಸ್ಸು | ಃ | 36 ವರ್ಷ | | |
| ವೃತ್ತಿ | ಃ | ವೈದ್ಯರು, ಅಪೋಲೋ ಆಸ್ಪತ್ರೆ, ಮೈಸೂರು | ಪ್ರಾ.ಸಾ. ಃ | 08 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ | 11 |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

. ನಾನು ನವೆಂಬರ್ *2014* ರಿಂದ ನವೆಂಬರ್ *2019* ರವರೆಗೆ ಅಪೋಲೋ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯರೆಂದು ಕೆಲಸ ಮಾಡಿರುತ್ತೇನೆ.

ದಿನಾಂಕಃ *23.12.2016* ರಂದು ಬೆಳಗ್ಗೆ *10.45* ಗಂಟೆಗೆ ಗಾಯಾಳು ಕೃಷ್ಣ ಈತನನ್ನು ಮಾರುತಿ ವ್ಯಾನಿನಲ್ಲಿ ನಮ್ಮ ಆಸ್ಪತ್ರೆಗೆ ತಂದಿದ್ದು ಸದರಿ ಕೃಷ್ಣ ಈತನನ್ನು ನಾನು ಮತ್ತು ನನ್ನ ಹಿರಿಯ ವೈದ್ಯರಾದ ಡಾ. ಲೋಕೇಶ್ ಕೆ.ವಿ. ಪರೀಕ್ಷೆ ಮಾಡಿದಾಗ ಸದರಿ ಗಾಯಗಳು ಕೃಷ್ಣ ಈತನಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ***Cut lacerated wound extending from right parietal region to right angle of the mandible resion exposing the skull bone and brain tissues.***
2. ***Cut Lacerated wound on the upper abdomen around 1 X 1 c.m.***
3. ***Cut Lacerated wound on the right four arm and elbow around 3 X 3 c.m.***
4. ***Cut Lacerated wound on the right index finger around 1 X 1 c.m.***

ಮೇಲೆ ಹೇಳಿದ ಗಾಯಗಳು ತೀವ್ರ ಸ್ವರೂಪದ ಗಾಯಗಳು ಆಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ.*15* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ*15(ಎ)* ಎಂದು ಗುರುತಿಸಲಾಯಿತು. ಆಸ್ಪತ್ರೆಗೆ ಬಂದಾಗ ಗಾಯಾಳು ಕೃಷ್ಣ ಈತನಿಗೆ ಪ್ರಜ್ಞೆ ಇರಲ್ಲಿಲ್ಲ ಆತನ ಜೊತೆ ಬಂದವರು ಓಂಟಿಕೊಪ್ಪಲದ ಲಾಯಲ್ ವರ್ಲ್ಡ್ ಶಾಪ್ ಹತ್ತಿರ ಲಾಂಗು ಮಚ್ಚು ಮತ್ತು ಚಾಕುವಿನಿಂದ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ. ಗಾಯಾಳು ಕೃಷ್ಣ ಈತನಿಗೆ ಚಿಕಿತ್ಸೆಯನ್ನು ಪ್ರಾರಂಭಿಸಿದೆವು. ಗಾಯಾಳು ಬೆಳಗ್ಗೆ ***11.40*** ಗಂಟೆಗೆ ಮೃತಪಟ್ಟಿರುತ್ತಾರೆ. ಆ ಬಗ್ಗೆ ನಾನು ಪೊಲೀಸರಿಗೆ ಮರಣದ ಮಾಹಿತಿ ಪತ್ರವನ್ನು ನೀಡಿರುತ್ತೇನೆ. ಸದರಿ ಮರಣದ ಮಾಹಿತಿ ಪತ್ರವನ್ನು ನಿಪಿ.*16* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*16(ಎ)* ಎಂದು ಗುರುತಿಸಲಾಯಿತು. ಪೊಲೀಸರು ಬಂದ ನಂತರ ಶವವನ್ನು ಪೊಲೀಸರಿಗೆ ವಹಿಸಿಕೊಟ್ಟಿರುತ್ತೇನೆ. ನಂತರ ಪೊಲೀಸರು ಮೃತನ ಮೈಮೇಲೆ ಇದ್ದ ಬಟ್ಟೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯು ಅಮಾನತು ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಮಾನತು ಪಂಚನಾಮೆಯನ್ನು ಈಗಾಗಲೇ ನಿ.ಪಿ.*13* ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*13(ಬಿ)* ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಗಾಯಾಳುವಿನ ಬಟ್ಟೆಯನ್ನು ನೋಡಿ ಗುರುತಿಸಿದ್ದು, ಟೀ ಶರ್ಟ, ಶ್ಯಾಂಡೋ ಬನಿಯನ್, ಒಂದು ಅಂಡರ್ ವೇರ್, ಒಂದು ಚಡ್ಡಿ *(ಹಾಫ್ ಪ್ಯಾಂಟು)* ಇವುಗಳನ್ನು ಮು.ಮಾ. *15* ರಿಂದ ಮು.ಮಾ.*18* ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-</u>**

. ನಮ್ಮ ಆಸ್ಪತ್ರೆಯಲ್ಲಿ ಎಂ.ಎಲ್.ಸಿ. ಪುಸ್ತಕವನ್ನು ಮೇಂಟೇನ್ ಮಾಡುತ್ತಾರೆ. ಆಸ್ಪತ್ರೆಗೆ ಎಂ.ಎಲ್.ಸಿ. ಕೇಸುಗಳು ಬಂದಾಗ ನಾವೇ ನಮೂದು ಮಾಡುತ್ತೇವೆ. ಗಾಯಾಳುವಿನ ಜೊತೆ ನಮ್ಮ ಆಸ್ಪತ್ರೆಗೆ ಶ್ರೀಕಾಂತ ಎನ್ನುವ ಸಂಬಂಧಿ ಆತನ ಜೊತೆ ಬಂದಿದ್ದರು. ಆ ದಿವಸ ಆಸ್ಪತ್ರೆಗೆ

ಅಂದಾಜು *30* ಜನರು ಆಸ್ಪತ್ರೆಗೆ ಬಂದಿದ್ದರು. ನಾವು ಎಲ್ಲರನ್ನು ಹೊರಗೆ ಕಳುಹಿಸಿ ಗಾಯಾಳುವನ್ನು ಮಾತ್ರ ಆಸ್ಪತ್ರೆಯ ಒಳಗಡೆ ತುರ್ತು ಚಿಕಿತ್ಸಾ ವಿಭಾಗಕ್ಕೆ ತೆಗೆದುಕೊಂಡುರುತ್ತೇವೆ. ಶ್ರೀಕಾಂತ ಕೊಟ್ಟ ಮಾಹಿತಿಯನ್ನು ನಾನು ಇಂಟಿಮೇಷನ್ ನಲ್ಲಿ ಬರೆದಿರುತ್ತೇನೆ. ನನ್ನ ಮುಂದೆ ಶ್ರೀಕಾಂತ ಈತನು ಯಾರು ಹಲ್ಲೆ ಮಾಡಿರುತ್ತಾರೆ ಎಂದು ಆತನ ಹೆಸರನ್ನು ಹೇಳಿರುವುದಿಲ್ಲ. ಮಾಹಿತಿ ಕೊಟ್ಟವರ ಸಹಿ ಪಡೆದುಕೊಳ್ಳುವ ಪದ್ಧತಿ ಇರುವುದಿಲ್ಲ. ಮಾಹಿತಿ ಕೊಟ್ಟವರ ಮೊಬೈಲ್ ನಂಬರನ್ನು ಕೊಟ್ಟಿರುತ್ತಾರೆ. ಮೃತ ಪಟ್ಟ ವ್ಯಕ್ತಿಯ ವಿಳಾಸ ಮಾತ್ರ ಕೊಟ್ಟಿರುತ್ತಾರೆ ಮಾಹಿತಿ ಕೊಟ್ಟ ವ್ಯಕ್ತಿಯ ಪೂರ್ಣ ವಿಳಾಸ ನಮಗೆ ಕೊಟ್ಟಿರುವುದಿಲ್ಲ. ಗಾಯಾಳುವನ್ನು ನಮ್ಮ ಆಸ್ಪತ್ರೆಗೆ ತಂದಾಗ ಆತನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಗಾಯಾಳುವಿಗೆ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದವರು ಗಾಯಾಳುವಿಗೆ ನೀರು ಕುಡಿಸಿಲ್ಲ ಎಂದು ಹೇಳಿರುತ್ತಾರೆ. ಗಾಯಾಳುವಿಗೆ ನಮ್ಮ ಆಸ್ಪತ್ರೆಗೆ ತರುವುದಕ್ಕಿಂತ ಮೊದಲು ಯಾವುದೇ ಪ್ರಥಮ ಚಿಕಿತ್ಸೆಯನ್ನು ಕೊಟ್ಟಿರುವುದಿಲ್ಲ. ಗಾಯಾಳುವಿಗೆ ಬ್ಲಂಟ್ ಫೋರ್ಸ್ ಇಂಪ್ಯಾಕ್ಟ್ ಆಗಿತ್ತು ಅಥವಾ ಇಲ್ಲ ಎನ್ನುವುದು ನಾನು ಪರೀಕ್ಷೆ ಮಾಡಿರುವುದಿಲ್ಲ. ಬಲಗೈ ಮೇಲಿರುವ ಗಾಯಗಳು ಡಿಫೆನ್ಸೀವ್ ಇಂಜೂರಿ ಇರಬಹುದು. ನಾನು ಗಾಯಾಳುವಿನ ತೆರಚಿದ ಗಾಯಗಳ ಬಗ್ಗೆ ಗಮನ ಹರಿಸಲಿಲ್ಲ. ನನ್ನ ಜೊತೆ ಇದ್ದ ನಮ್ಮ ಹಿರಿಯ ವೈದ್ಯರ ಸಹಿ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಇರುವುದಿಲ್ಲ. ತಲೆಯ ಮೇಲೆ ಆದ ಗಾಯ ಕಟ್ ಆದ ಗಾಯ ಇತ್ತು. ಗಾಯಾಳುವಿಗೆ ಆದ ಗಾಯ ಮೆದುಳಿನ ಅಂಶಗಳು ಹೊರಗಡೆ ಬಂದಿದ್ದವು. ಚಾಕುವಿನಿಂದ ಹೊಡೆದರೆ ಗಾಯಾಳುವಿಗೆ ಆದ ಗಾಯಗಳು ಆಗಬಹುದು. ಗಾಯಾಳುವಿಗೆ ಆದ ಗಾಯಗಳು ಭಾರವಾದ ಶಾರ್ಪ್ ಆಬ್ಜೆಕ್ಟ ನಿಂದ ಆಗಬಹುದು. ಗಾಯಾಳುವಿಗೆ ಆದ ಕೈಗಳ ಮೇಲೆ ಆದ ಗಾಯಗಳು ಕೊಯ್ದು ಗಾಯಗಳು ಇದ್ದವು. ಕೈಗೆ ಆದ ಗಾಯ ಆಳವಾಗಿ ಇತ್ತು. ಗಾಯಳುವಿಗೆ ಗಾಯ ಆದ ಜಾಗದಲ್ಲಿ ಮಡ್ಡು ಮತ್ತು ಡರರ್ಟ ಇತ್ತು. ಗಾಯಾಳುವಿಗೆ ಆದ ಗಾಯಗಳಿಗೆ ಪರೀಕ್ಷೆ ಮಾಡುವಾಗ ನರ ರೋಗ ತಜ್ಞರ ಅವಶ್ಯಕತೆ ಇತ್ತು ಎಂದು ಕೇಳಿದ್ದಕ್ಕೆ ಸಾಕ್ಷಿ ಡಾ. ಬೋಪಯ್ಯ ನರ ರೋಗ ತಜ್ಞರು ಹಾಜರು ಇದ್ದರು ಎಂದು ಹೇಳುತ್ತಾರೆ. ತುರ್ತು ಚಿಕಿತ್ಸಾ ವಿಭಾಗದಲ್ಲಿ ಯಾರು ಭಾಗಿಯಾಗಿದ್ದಾರೆ ಎನ್ನುವ ಕಾಲಂನಲ್ಲಿ

ಡಾ. ಬೋಪಯ್ಯ ಇವರ ಹೆಸರು ಕೂಡ ಇರುತ್ತದೆ ಆದರೆ ಅವರು ಸಹಿ ಮಾಡಿರುವುದಿಲ್ಲ. ಗಾಯದ ದಿಕ್ಕುಗಳು (ಡೈರೆಕ್ಷನ್ ಆಫ್ ದಿ ಇಂಜೂರಿ) ಬರೆಯಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಗಾಯಾಳುವಿಗೆ ಆಸ್ಪತೆರಯಲ್ಲಿ ದಾಖಲು ಆದಾಗ ವೆಂಟೀಲೇಟರ್ ಅಳವಡಿಸಿರುತ್ತೇವೆ ಎಂದರೆ ಸರಿ ಇದೆ. ಗಾಯಾಳುವಿಗೆ ನಾವು ಚಿಕಿತ್ಸೆ ಪ್ರಾರಂಬಿಸಿದಾಗ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ನಾವು ಗಾಯಾಳುವಿಗೆ ತಲೆಗೆ ಆದಾ ಗಾಯಕ್ಕೆ ಹೊಲಿಗೆ ಹಾಕಿದ್ದೆವು. ಮೋಟಾರು ಸೈಕಲ್ ಅಪಘಾತದಲ್ಲಿ ಗಾಯಾಳುವಿಗೆ ಗಾಯ ಆದಾಗ ಈ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆಗಳು ಇವೆ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅಗಬಹುದು ಎಂದು ಹೇಳುತ್ತಾರೆ. ಗಾಯಾಳುವಿನ ಮೈಮೇಲೆ ಇದ್ದ ಬನಿಯನ್ನು ಕಟ್ ಮಾಡಿ ತೆಗೆದಿರುತ್ತೇವೆ. ಗಾಯಾಳುವಿನ ರಕ್ತದ ಸ್ಯಾಂಪಲನ್ನು ತೆಗೆದು ನಾನು ಪೊಲೀಸರಿಗೆ ನೀಡಿರುವುದಿಲ್ಲ.

**<u>ಪಾಟೀ ಸವಾಲು : ಆರೋಪಿ 7 ಪರ ಜೆ.ವಿ.ಆರ್. ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು : ಆರೋಪಿ 8, 10, 11 ಮತ್ತು 12 ರ ಪರ ಜಿ.ಎಂ.ಎನ್. ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲು : ಆರೋಪಿ 9 ಪರ ಯು.ಎಸ್. ವಕೀಲರಿಂದಃ-</u>**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*